ಸರ್ಕಾರದವರು ಇದನ್ನು ತೀವ್ರವಾಗಿ ಆಲೋಚಿಸಿ, ಕಳುಹಿಸಿರುವ ಸುತ್ತೋಲೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಎಲ್ಲಾ ರೈತರಿಗೆ ಈ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮತ್ತು ಅವರಿಂದ ನಿರ್ದಿಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈಗ ಸನ್ಮಾನ್ಯ ಚಂದ್ರೇಗೌಡರು ಏನೊಂದು ನಿರ್ಣಯವನ್ನು ಮಂಡಿಸಬೇಕು ಎಂದು ಸೂಚನೆ ಕೊಟ್ಟಿದ್ದಾರೆ, ಇದರ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ, ಮೊನ್ನೆ ಸದನ ಕೊನೆಯ ದಿನ ಸೇರಿದ್ದಾಗ ನಾನು ಮುಖ್ಯಮಂತ್ರಿಗಳಿಗೆ ಕೇಳಿದ್ದೆ. ಈ ರೀತಿ ಬೊಂಬಾಯಿಯಲ್ಲಿ ಗಲಭೆಯಾಗುತ್ತಿದೆ, ಬೊಂಬಾಯಿಯಿಂದ ಅನೇಕ ಜನ ಕನ್ನಡಿಗರು ಹೊರಗಡೆ ಬರುತ್ತಿದ್ದಾರೆ. ಅವರ ಸ್ಥಿತಿಗತಿಗಳೇನು, ಅವರ ಆಸ್ತಿಪಾಸ್ತಿಗೆ ತೊಂದರೆಯಾಗಿದೆ ಎಂದು ಕೇಳಿದಾಗ, ಇಲ್ಲ ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆಗೆ ನಾನು ಮಾತನಾಡಿದ್ದೇನೆ. ನಾನು ಸತತವಾಗಿ ಕಾನ್‌ಸ್ಟಂಟ್ ಟಚ್‌ನ್ನು ಅವರ ಜೊತೆಯಲ್ಲಿ ಇಟ್ಟುಕೊಂಡಿದ್ದೇನೆ. ಆ ರೀತಿ ಏನೂ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ನಿನ್ನೆ ದಿನ ಬೊಂಬಾಯಿಗೆ ಭೇಟಿ ನೀಡಿದ ಮೇಲೆ ಮಾನ್ಯ ಪ್ರಧಾನ ಮಂತ್ರಿಗಳು ಬೊಂಬಾಯಿಯಿಂದ ಬಹಳ ಜನ ವಲಸೆ ಹೋಗುತ್ತಿದ್ದಾರೆಂದು ಹೇಳಿದ್ದಾರೆ. ಇದನ್ನು ನಾವು ತಪ್ಪಿಸಬೇಕಾಗುತ್ತದೆ, ಒಂದು ಹಿಂಸಾಚಾರವನ್ನು ತಡೆಗಟ್ಟುವುದು ಮೊದಲನೇ ಕೆಲಸ ಆದರೆ, ಅಷ್ಟೇ ಆದ್ಯತೆಯನ್ನು ಬೊಂಬಾಯಿನಿಂದ ಹೊರಗಡೆ ವಲಸೆ ಹೋಗತಕ್ಕದನ್ನು ತಡೆಗಟ್ಟಬೇಕೆಂಬ ಮಾತನ್ನು ಸ್ವತಃ ಪ್ರಧಾನಮಂತ್ರಿಗಳೇ ಹೇಳಿದ್ದಾರೆ. ಆದ್ದರಿಂದ ನನಗಾದರೂ ಅನ್ನಿಸುತ್ತದೆ, ನಮ್ಮ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಅವರೇ ಸಂಪರ್ಕ ಮಾಡಿದರೋ ಅಥವಾ ಅವರ ಆಪ್ತ ಸಹಾಯಕ ಸಿಬ್ಬಂದಿಯವರು ಏನಾದರೂ ತಪ್ಪು ಮಾಹಿತಿ ಕೊಟ್ಟಿದ್ದಾರೆಯೋ, ಯಾವ ಮಾಹಿತಿ ಆಧಾರದ ಮೇಲೆ ಮಾನ್ಯ ವೀರಪ್ಪ ಮೊಯಿಲಿಯವರು ಹಾಗೆ ಹೇಳಿದ್ದಾರೋ ಗೊತ್ತಿಲ್ಲ. ಆದ್ದರಿಂದ ತಾವು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಶ್ರೀ ವಿ.ಎಸ್. ಕೌಜಲಗಿಯವರು ಸಂಜೆವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯದ ಮೇಲೆ ಒಂದು ಹಕ್ಕುಚ್ಯುತಿ ಸೂಚನೆಯನ್ನು ಕಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಸಂಜೆವಾಣಿ ಅಲ್ಲ ' ಈ ಸಂಜೆ '

ಅಧ್ಯಕ್ಷರು:– ಹೌದು 'ಸಂಜೆವಾಣಿ ಅಲ್ಲ ಈ ಸಂಜೆ ' ಈ ಸೂಚನೆಯನ್ನು ನಾನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಿಕೊಡುತ್ತಿದ್ದೇನೆ. ಶ್ರೀ ಅಜೀಜ್‌ಸೇಠ್ ಅವರು ಈ ಸದನದ ಮಾನ್ಯ ಸದಸ್ಯರಾದ ಯಡಿಯೂರಪ್ಪನವರ ಹೇಳಿಕೆ ಬಗ್ಗೆ ಒಂದು ಹಕ್ಕುಚ್ಯುತಿ ಸೂಚನೆಯನ್ನು ಕೊಟ್ಟಿದ್ದಾರೆ, ಅದನ್ನು ಕೂಡ ನಾನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸಿಕೊಡುತ್ತಿದ್ದೇನೆ. ಶ್ರೀ ಜಿ. ಪುಟ್ಟಸ್ವಾಮಿ ಗೌಡರು ವಿಧಾನಮಂಡಲದಲ್ಲಿ ಮಂಡಿತವಾಗಿರತಕ್ಕಂಥ ಅಂದಾಜು ಸಮಿತಿಯ ವರದಿಯ ಬಗ್ಗೆ ಒಂದು ವೈಯಕ್ತಿಕ ಹೇಳಿಕೆಯನ್ನು ಕೊಡಬೇಕು ಎಂದು ನನ್ನ ಪರವಾನಗಿಯನ್ನು ಕೇಳಿದ್ದಾರೆ. ಅವರಿಗೆ ಹೇಳಿಕೆಯನ್ನು ನೀಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

(2) ಸದಸ್ಯರ ಹೇಳಿಕೆ

ಅಂದಾಜು ಸಮಿತಿಯವರು ಅಧ್ಯಕ್ಷರನ್ನು ಮಂಡಿಸಿದ ಮಧ್ಯಾಂತರ ವರದಿ ಬಗ್ಗೆ

† ಶ್ರೀ ಜಿ. ಪುಟ್ಟಸ್ವಾಮಿಗೌಡ:– ಸನ್ಮಾನ್ಯ ಅಧ್ಯಕ್ಷರೇ, ವಿಧಾನಸಭೆಯಲ್ಲಿ ದಿನಾಂಕ 5.1.1993ರಂದು ಅಂದಾಜು ಸಮಿತಿಯವರು ಮಂಡಿಸಿರುವ ಮಧ್ಯಂತರ ವರದಿಯ ಸತ್ಯಾಸತ್ಯತೆ ಬಗ್ಗೆ ನಾನು ನೀಡಿದ ಸ್ಪಷ್ಟನೆ.

''1991-92ನೇ ಸಾಲಿನಲ್ಲಿ ಕೆಲವು ವಿದೇಶಿ ವಿದ್ಯಾರ್ಥಿಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೇರಿಸಿರುವ ವಿಷಯಗಳ ಬಗ್ಗೆ ಅಂದಾಜು ಸಮಿತಿಯ ಮಧ್ಯಂತರ ವರದಿಯನ್ನು ಸದನಕ್ಕೆ ಒಪ್ಪಿಸಿದ್ದಾರೆ.''

ವಿದೇಶಿ ವಿದ್ಯಾರ್ಥಿಗಳನ್ನು ಕಾಲೇಜುಗಳಲ್ಲಿ ಸೇರಿಸುವ ಹಾಗೂ ತೆಗೆದಿರುವ ಬಗ್ಗೆ ದಾಖಲೆಗಳ ಸಹಿತ ಸತ್ಯಾಂಶವನ್ನು ನೀಡುತ್ತಿದ್ದೇನೆ.

ರಾಜ್ಯದಲ್ಲಿ ಇರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ನಿರ್ದಿಷ್ಟವಾದ ನಿಯಮ ಹಾಗೂ ಕ್ರಮಗಳಿವೆ. ಶೇಕಡ 85ರಷ್ಟು ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟದ ಮುಕ್ತ ಪ್ರವೇಶ ಪರೀಕ್ಷೆ ಆಧಾರದ ಮೇಲೆ ಸೇರಿಸಿಕೊಳ್ಳಲಾಗುವುದು. ಉಳಿದ ಶೇಕಡ 15ರಷ್ಟನ್ನು ಕೇಂದ್ರ ಸರ್ಕಾರವು ನಡೆಸುವ ಪ್ರವೇಶ ಪರೀಕ್ಷೆಯ ಆಧಾರದ ಮೇಲೆ ಕಳುಹಿಸುವ ಪಟ್ಟಿಯಂತೆ ಸೇರಿಸಿಕೊಳ್ಳಲಾಗುವುದು.

ಈ ರೀತಿ ಆಯ್ಕೆ ಮಾಡಿದ ಪಟ್ಟಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಕೇಂದ್ರ ಸರ್ಕಾರದ ಕುಟುಂಬ ಕಲ್ಯಾಣ ನಿರ್ದೇಶನಾಲಯದವರು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ನೇರವಾಗಿ ಕಳುಹಿಸುತ್ತಾರೆ. ಸಚಿವಾಲಯದ ಗಮನಕ್ಕೆ ಬರುವುದಿಲ್ಲ.

ಕೇಂದ್ರ ಸರ್ಕಾರಕ್ಕೆ ಮೀಸಲಿಟ್ಟಿರುವ ಶೇಕಡ 15ರಷ್ಟು ಸ್ಥಾನಗಳಿಗೆ ವಿದೇಶಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಬರುವುದಿಲ್ಲ. ಆದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಂದಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಕೆ.ಎಲ್. ನೇಗಿಯವರು ಕೆಲವು ವಿದೇಶಿ ವಿದ್ಯಾರ್ಥಿಗಳನ್ನು ಸರ್ಕಾರಿ ಕಾಲೇಜುಗಳಿಗೆ ಸೇರಿಸಿಕೊಳ್ಳುವಂತೆ ದಿನಾಂಕ 12.8.91 ರಂದು ಆದೇಶ ನೀಡಿದ್ದರು (ಅನುಬಂಧ.ಎ)

ಈ ವಿಷಯವು ನನ್ನ ಗಮನಕ್ಕೆ ಬಂದಾಗ ದಿನಾಂಕ 15.12.1991ರಂದು ವಿಚಾರಣೆ ನಡೆಸಲು ಸ್ಪಷ್ಟ ಆದೇಶ ನೀಡಿದ್ದೇನೆ (ಅನುಬಂಧ.ಬಿ)

ಕೇಂದ್ರ ಸರ್ಕಾರದ ವಿದೇಶಾಂಗ ಇಲಾಖೆ ದಿನಾಂಕ 29-8-91ರಂದು ನೇರವಾಗಿ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಪತ್ರ ಬರೆದು ಐದು ವಿದೇಶಿ ವಿದ್ಯಾರ್ಥಿಗಳನ್ನು ಬೆಂಗಳೂರು ವೈದ್ಯಕೀಯ ಕಾಲೇಜಿಗೆ ಸೇರಿಸಿಕೊಳ್ಳಲು ಸೂಚಿಸಿದ್ದರು. ವೈದ್ಯಕೀಯ ಶಿಕ್ಷಣ ನಿರ್ದೇಶಕರು ಇದನ್ನು ಸಚಿವಾಲಯದ ಗಮನಕ್ಕೆ ತರದೆ ವಿದೇಶಿ ವಿದ್ಯಾರ್ಥಿಗಳನ್ನು ಸೇರಿಸಿದ್ದರು. ಅನುಬಂಧ(ಸಿ).

ಈ ವಿಷಯ ನನ್ನ ಗಮನಕ್ಕೆ ಬಂತು. ತದನಂತರ ಬಂದ ಕಾರ್ಯದರ್ಶಿ ಶ್ರೀ ಶಾಂತಕುಮಾರ್ ಅವರಿಗೆ ಈ ಬಗ್ಗೆ ತನಿಖೆ ಮಾಡಲು ಸ್ಪಷ್ಟ ನಿರ್ದೇಶನ ಕೊಟ್ಟ ನಂತರ ಅವರು ಸುಧೀರ್ಘವಾದ ವಿಚಾರಣೆ ಮಾಡಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ನೀಡಿದ್ದರು. ಕೇಂದ್ರ ಸರ್ಕಾರಕ್ಕೆ ಮೀಸಲಾಗಿಟ್ಟ ಶೇಕಡ 15 ಸ್ಥಾನಗಳಿಗೆ ವಿದೇಶಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಬರುವುದಿಲ್ಲ. ಕೇಂದ್ರ ಸರ್ಕಾರದಿಂದ ಬಂದ ಪತ್ರ ಮತ್ತು ಟೆಲೆಕ್ಸ್ ಸೂಚನೆ ಆಧಾರ ರಹಿತ ಮತ್ತು ಸುಳ್ಳು ದಾಖಲೆ ಹಾಗೂ ನಿಯಮಗಳನ್ನು ಉಲ್ಲಂಘಿಸಿ ಸೇರಿಸಿಕೊಳ್ಳಲಾಗಿದೆ ಎಂದು ಸೂಚಿಸುತ್ತಾ ಈ ರೀತಿ ಸೇರಿಸಿಕೊಂಡ 14 ವಿದೇಶಿ ವಿದ್ಯಾರ್ಥಿಗಳನ್ನು ಕಾಲೇಜುಗಳಿಂದ ತೆಗೆದುಹಾಕಬೇಕೆಂದು ಮತ್ತು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದರು. ಅನುಬಂಧ(ಡಿ).

ವರದಿಯನ್ನು ಗಮನಿಸಿ ವಿದೇಶಿ ವಿದ್ಯಾರ್ಥಿಗಳನ್ನು ತೆಗೆದು ಹಾಕುವಂತೆಯೂ ಸುಳ್ಳು ದಾಖಲೆಗಳನ್ನು ನೀಡಿದ ವಿದ್ಯಾರ್ಥಿಗಳ ಮೇಲೆ ಪೋಲಿಸರಿಗೆ ದೂರು ನೀಡುವಂತೆಯೂ ಮತ್ತು ನಿಯಮಗಳನ್ನು ಉಲ್ಲಂಘಿಸಿ ಕಾಲೇಜುಗಳಿಗೆ ಸೇರಿಸಿಕೊಳ್ಳುವಂತೆ ಆದೇಶ ನೀಡಿದ, ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆಯೂ ದಿನಾಂಕ 22-7-1992 ಮತ್ತು

23-7-1992ರಂದು ಸ್ಪಷ್ಟ ಆದೇಶ ನೀಡಿದ್ದೇನೆ. ಅನುಬಂಧ (ಇ) ಮತ್ತು (ಎಫ್).

ಫಾರ್ಮಸಿ ಕಾಲೇಜುಗಳು

ಡಿ ಫಾರ್ಮ ಕಾಲೇಜುಗಳಿಗೂ ಬಿ ಫಾರ್ಮ ಕಾಲೇಜುಗಳಿಗೂ ವ್ಯತ್ಯಾಸ ಇರುವುದನ್ನು ಗಮನಿಸಬೇಕು. ಫಾರ್ಮಸಿ ಕಾಲೇಜುಗಳನ್ನು ಮಂಜೂರು ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಆದರೆ ಆಕ್ಷೇಪಣವಿಲ್ಲವೆಂಬ ಪತ್ರವನ್ನು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾದವರಿಗೆ ನೀಡಬಹುದು. ಅದರಂತೆ ಪರಿಶೀಲನಾ ಸಮಿತಿಯವರು ಪರಿವೀಕ್ಷಿಸಿದ ನಂತರ ಡಿ ಫಾರ್ಮ ಕಾಲೇಜುಗಳಿಗೆ ಷರತ್ತುಗಳನ್ನು ವಿಧಿಸಿ, ಅನಾಕ್ಷೇಪಣ ಪತ್ರವನ್ನು (ಎನ್ ಒ ಸಿ ನೀಡಲಾಗಿದೆ). ಸಂಸ್ಥೆಯವರಿಗೂ ಸಹ ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾದವರ ಅನುಮತಿ ಇಲ್ಲದೆ ಕಾಲೇಜನ್ನು ತೆರೆಯಬಾರದು, ಅವರು ವಿಧಿಸುವ ಷರತ್ತುಗಳಿಗೆ ಒಳಪಡಬೇಕೆಂದೂ ಅವರ ಮೇಲ್ವಿಚಾರಣೆಯಲ್ಲೇ ಪರೀಕ್ಷೆಗಳು ನಡೆಯಬೇಕೆಂದು ಷರತ್ತುಗಳನ್ನು ವಿಧಿಸಲಾಗಿದೆ. (ಅನುಬಂಧ ಜಿ).

ಬಿ. ಫಾರ್ಮ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯದವರಿಗೆ ಅಫೀಲಿಯೇಷನ್ ಮಂಜೂರಾತಿಯನ್ನು ಸಚಿವ ಸಂಪುಟ ನೀಡುತ್ತದೆ. ಇದಕ್ಕೂ ಕೂಡ ಆದೇ ಷರತ್ತುಗಳನ್ನು ಅಳವಡಿಸಿರುತ್ತಾರೆ.

ನರ್ಸಿಂಗ್ ಶಾಲೆ ಮತ್ತು ಕಾಲೇಜುಗಳು

ರಾಜ್ಯದಲ್ಲಿ ಮಂಜೂರಾಗಿದೆ ಎನ್ನಲಾದ ನರ್ಸಿಂಗ್ ಕಾಲೇಜುಗಳು ಮತ್ತು ಶಾಲೆಗಳು ಆಧಾರರಹಿತವಾಗಿ ಮಂಜೂರಾಗಿಲ್ಲ. ಯಾವ ನಿಯಮಗಳೂ ಉಲ್ಲಂಘನೆಯಾಗಿಲ್ಲ. 2000ನೇ ಇಸವಿಗೆ ಎಲ್ಲರಿಗೂ ಆರೋಗ್ಯ ಎಂಬ ಸರ್ಕಾರದ ನೀತಿಗೆ ಅನುಗುಣವಾಗಿ ಮಾನವ ಸಂಪನ್ಮೂಲ ವೃದ್ಧಿಪಡಿಸುವ ದೃಷ್ಟಿಯಲ್ಲಿ ಅಗತ್ಯ ಸೌಲಭ್ಯವಿರುವ ಸಂಸ್ಥೆಗಳಿಗೆ ನರ್ಸಿಂಗ್ ಶಾಲೆಗಳನ್ನು ಮಂಜೂರು ಮಾಡಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಸುತ್ತೋಲೆಗಳ ಹಾಗೂ ನಿಬಂಧನೆಗಳಿಗೆ ಒಳಪಟ್ಟೇ ಮಂಜೂರು ಮಾಡಿದೆ. ಅನುಬಂಧ (ಹೆಚ್).

ಮಾನವ ಸಂಪನ್ಮೂಲ ಸಮೀಕ್ಷೆಯಲ್ಲಿ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಿರುದ್ಯೋಗ ಸಮಸ್ಯೆ ಇರುವುದಿಲ್ಲ. ಪ್ಯಾರಾ ಮೆಡಿಕಲ್ ಸಿಬ್ಬಂದಿಯ ಕೊರತೆಯನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಸಂಪನ್ಮೂಲಗಳ ಕೊರತೆಯಿಂದ ಸರ್ಕಾರವೇ ಫಾರ್ಮಸಿ ಮತ್ತು ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಸಾಧ್ಯವಿಲ್ಲ. 10-15 ವರ್ಷಗಳಿಂದ ಸರ್ಕಾರ ನೇರವಾಗಿ ಫಾರ್ಮಸಿ ಅಥವಾ ನರ್ಸಿಂಗ್ ಕಾಲೇಜುಗಳನ್ನು ಪ್ರಾರಂಭಿಸಿಲ್ಲ. ತಾಂತ್ರಿಕ ಸಂಪನ್ಮೂಲ ರೂಢಿಸಲು ಖಾಸಗಿ ಸಂಸ್ಥೆಗಳ ಮೂಲಕ ಮಾಡಬೇಕೆಂದು ವೃತ್ತಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಯೋಜನಾ ಆಯೋಗ ಸರ್ಕಾರಕ್ಕೆ ಸಲಹೆ ನೀಡಿದೆ (ಅನುಬಂಧ (ಜಿ))

ವಿದೇಶಕ್ಕೆ ಹೋಗಿ ಅನಧಿಕೃತ ಗೈರುಹಾಜರಿ ಆದ ವೈದ್ಯರುಗಳನ್ನು ಕೆಲಸಕ್ಕೆ ತೆಗೆದುಕೊಂಡಿರುವ ಬಗ್ಗೆ

ಕೆಲವು ಸರ್ಕಾರಿ ವೈದ್ಯರುಗಳು ಅನಧಿಕೃತವಾಗಿ ಗೈರು ಹಾಜರಾಗಿ ವಿದೇಶಕ್ಕೆ ತೆರಳಿ ವಾಪಸ್ಸು ಬಂದನಂತರ ಅವರುಗಳಿಗೆ ಕೆಲಸ ನೀಡಲಾಗಿದೆ ಎಂಬುದು ಜನರು ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಸಮಿತಿಯು ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು. ಈ ಬಗ್ಗೆ ಯಾವ ನಿರ್ದಿಷ್ಟ ಪ್ರಕರಣವೂ ನನ್ನ ಗಮನಕ್ಕೆ ಬಂದಿಲ್ಲ.

ಸದನದ ಗೌರವಾನ್ವಿತ ಸದಸ್ಯರ ಹಕ್ಕು ರಕ್ಷಣೆಯ ಜವಾಬ್ದಾರಿ ಈ ಸರ್ವೋಚ್ಚ ವೇದಿಕೆಗೆ

ಇರುವ ಕಾರಣ ಸಭಾಧ್ಯಕ್ಷರು ನನ್ನ ಹಕ್ಕು ರಕ್ಷಣೆ ಹಾಗೂ ಚಾರಿತ್ರ್ಯ ರಕ್ಷಣೆ ಮಾಡಲು ಮುಂದಾಗಬೇಕೆಂದು ಕೋರುತ್ತೇನೆ.

ಈ ಒಂದು ವರದಿಯನ್ನು ದಾಖಲಾತಿಗಳ ಸಮೇತ ಸದನದ ಮುಂದೆ ಇಡುತ್ತಿದ್ದೇನೆ. ಇದನ್ನು ತಾವು ಪರಿಶೀಲಿಸಿ, ಆ ವರದಿಯ ಬಗ್ಗೆ ಎಷ್ಟು ಸತ್ಯಾಸತ್ಯತೆ ಇದೆ ಎನ್ನುವ ಬಗ್ಗೆ ತಾವು ನಿರ್ಧಾರ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಂಥ ಹೇಳಿಕೆಯನ್ನು ಕೇಳಿದೆ. ಈ ಸದನ ಒಂದು ಅಂದಾಜು ಸಮಿತಿಯನ್ನು ಮಾಡಿದೆ. ಆ ಎಸ್ಟಿಮೇಟ್ ಕಮಿಟಿಯ ಕೆಲಸವನ್ನು ನಾವು ಪ್ರಾರಂಭ ಮಾಡಿದಾಗ ಮೆಡಿಕಲ್ ಡಿಪಾರ್ಟ್‌ಮೆಂಟನ್ನು ನಮ್ಮ ಸ್ವಇಚ್ಛೆಯಿಂದ ತೆಗೆದುಕೊಂಡಿದ್ದು ಅಲ್ಲ, ನಮ್ಮ ಹಿಂದಿನ ಕಮಿಟಿಯವರು ಮೆಡಿಕಲ್ ಡಿಪಾರ್ಟ್‌ಮೆಂಟನ್ನು ಎಗ್ಸಾಮಿನೇಷನ್‌ಗೆ ತಗೊಂಡಿದ್ದರು. ಆ ಹಂತದಲ್ಲಿ ನಾವು ಮೆಂಬರುಗಳಾಗಿ ಅದನ್ನು ಎಗ್ಸಾಮಿನೇಷನ್‌ಗೆ ತೆಗೆದುಕೊಂಡಿದ್ದೇವೆ. ನಾವು ಕೊಟ್ಟಿರತಕ್ಕಂಥ ವರದಿ ಇಲಾಖೆಯವರು ಒದಗಿಸಿದಂತಹ ಮಾಹಿತಿ, ಫೈಲು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಂತಹ ಹೇಳಿಕೆ, ಇದನ್ನು ನಮ್ಮ ಸಮಿತಿಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ಸದನಕ್ಕೆ ವರದಿಯನ್ನು ಕೊಟ್ಟಿದ್ದೇವೆ. ಇದರಲ್ಲಿ ಯಾವ ವಿಧವಾದ ಉತ್ಪ್ರೇಕ್ಷೆಯನ್ನೂ ಮಾಡಿಲ್ಲ, ನಮ್ಮ ಗಮನಕ್ಕೆ ಬಂದಿದ್ದನ್ನು ಕೈಬಿಟ್ಟಿಲ್ಲ. ನಮ್ಮ ದೇಶದ ಹಿತದೃಷ್ಟಿಯಿಂದ ಜನಗಳ ಹಿತದೃಷ್ಟಿಯಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವ ದೃಷ್ಟಿಯಿಂದ ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿ ವರದಿಯನ್ನು ಇಲ್ಲಿ ಕೊಟ್ಟಿದ್ದೇವೆ. ರೂಲ್ ವಿರುದ್ಧವಾಗಿಯೂ ಕೂಡ ನಾವು ಹೋಗಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದನ್ನು ನಿಮ್ಮ ಕಮಿಟಿಗೆ ಕಳುಹಿಸಿಕೊಡುತ್ತೇವೆ. ಅದನ್ನು ನೀವು ವಿಮರ್ಶೆ ಮಾಡಿ ಆನಂತರ ನಿಮ್ಮ ಅಂತಿಮ ವರದಿಯನ್ನು ಕೊಡುತ್ತೀರಲ್ಲ, ಅದನ್ನು ಅಲ್ಲಿ ಕನ್ಸಿಡರ್ ಮಾಡಿ.

ಶ್ರೀ ಸಿ. ಬೈರೇಗೌಡ:– ಅದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಗೌಡರು ಅಧ್ಯಕ್ಷರು ಎಂಬ ಪದ ಬಳಸಿದ್ದಾರೆ.

ಅಧ್ಯಕ್ಷರು:– ಇಲ್ಲಾ ಅದು ಸಮಿತಿ ಎಂದು ಆಗಬೇಕು. ಅಧ್ಯಕ್ಷರು ಎಂದು ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ:– ಏಕೆಂದರೆ ಸಮಿತಿ ಅಂದರೆ ಅಧ್ಯಕ್ಷರು ಮಾತ್ರ ಆಗುವುದಿಲ್ಲ.

ಅಧ್ಯಕ್ಷರು:– ಅದು ತಿದ್ದುಪಡಿ ಆಗಬೇಕಾಗುತ್ತದೆ. ಅಧ್ಯಕ್ಷರು ಎನ್ನುವ ಪದ ತೆಗೆದು ಸಮಿತಿ ಎಂದು ಮಾಡಬೇಕು. ಇದನ್ನು ಕೂಡ ಸಮಿತಿಗೆ ಕಳುಹಿಸಿಕೊಡುತ್ತೇನೆ, ಸಮಿತಿಯವರು ಅದನ್ನು ಪುನರ್ ಪರಿಶೀಲನೆ ಮಾಡುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೆ, ನಾನು ಪೂರ್ತಿ ಮಾಡಿಲ್ಲ. ಅದರ ಬಗ್ಗೆ ಹೇಳಬೇಕಾದ ವಿಚಾರ ಇದೆ. ಅದನ್ನು ಕಳುಹಿಸಿದರೆ ವೇರಿಫೈ ಮಾಡುತ್ತೇವೆ. ನಾವು ಇರುವುದೇ ಅದಕ್ಕೋಸ್ಕರ. ಆದರೆ ಇಲ್ಲಿ ಬಂದಿರತಕ್ಕಂತಹ....

ಅಧ್ಯಕ್ಷರು:– ಚರ್ಚೆ ಅವಶ್ಯಕತೆ ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:– ನಾನು ಚರ್ಚೆ ಮಾಡುತ್ತಾ ಇಲ್ಲ. ಅವರು ಹೇಳಿದ್ದನ್ನು ಕೇಳಿಸಿಕೊಂಡು ಸುಮ್ಮನೆ ಇದ್ದುಬಿಟ್ಟರೆ ಅದು ಪೂರ್ತಿಯಾಗುವುದಿಲ್ಲ. ಅವರು ಹೇಳಿರತಕ್ಕಂತಹ ವಿಚಾರ ಏನು ಇದೆಯೋ ಅದರ ಬಗ್ಗೆ ನಾನು ಸ್ವಲ್ಪ ಹೇಳಬೇಕೋ? ಬೇಡವೋ?

ಅಧ್ಯಕ್ಷರು:– ಇಲ್ಲ, ಅದು ಏಕೆ ಇಲ್ಲ ಎನ್ನುವುದನ್ನು ನಾನು ನಿಮಗೆ ಹೇಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೆ, ಪುಸ್ತಕದಲ್ಲಿ ಇದೆಯೋ ಅದನ್ನೇ ಫಾಲೋ ಮಾಡಿಕೊಂಡು ಹೋದರೆ ಹೇಗೆ? ಹೊಸ ವಿಚಾರಗಳು ಬಂದರೆ ಹೊಸ ಸಂಪ್ರದಾಯಗಳನ್ನು ಹಾಕಬೇಕಾಗುತ್ತದೆ.

ಅಧ್ಯಕ್ಷರು:– ನೀವು ಹಾಕಿದ್ದೀರಿ. ಪುಸ್ತಕದಲ್ಲಿ ಹೇಳಿದಂತೆ ಬರೆಯಬೇಕು ಎಂದು ಏನಿಲ್ಲ. ನಮಗೆ ತೋರುವಂತಹ ರೀತಿಯಲ್ಲಿ....

ಶ್ರೀ ಕೆ.ಹೆಚ್. ಹನುಮೇಗೌಡ:– ಈಗ ಈ ಸದನದಲ್ಲಿ ಯಾವುದೇ ಕಮಿಟಿ ಕೊಟ್ಟಂತಹ ರಿಪೋರ್ಟ್ ಬಗ್ಗೆ ಪರ್ಸನಲ್ ಎಕ್ಸ್‌ಪ್ಲನೇಷನ್ ಹೇಳಿರುವುದು ಈ ಸದನದ ಇತಿಹಾಸದಲ್ಲೇ ಇಲ್ಲವಂತೆ. ಈಗ ಹೊಸದಾಗಿ ನೀವು ಕೊಟ್ಟಿದ್ದೀರಿ, ಸಂತೋಷ. ನಿಮ್ಮ ರೂಲಿಂಗ್‌ನ್ನು ನಾನೇನು ಕೊಶ್ಚನ್ ಮಾಡುತ್ತಾ ಇಲ್ಲ. ಈ ಹೊಸ ಸಂಪ್ರದಾಯ ಪ್ರಾರಂಭವಾದ್ದರಿಂದ ಅವರು ಏನು ಹೇಳಿದರು ಅದಕ್ಕೆ ನಿಜಾಂಶ ಏನು ಎಂದು ಹೇಳಬೇಕೋ ಬೇಡವೋ? ನಾನು ಸಮಿತಿ ಪರವಾಗಿ ಹೇಳುತ್ತಿದ್ದೇನೆ. ಇದು ನನ್ನ ಸ್ವಂತ ಇಚ್ಛೆಯಿಂದ ಏನೂ ಹೇಳುತ್ತಿಲ್ಲ.

ಅಧ್ಯಕ್ಷರು:– ಅದಕ್ಕೆ ನಾನು ಏನು ಹೇಳಿದೆ, ಅವರು ಮಾಡಿರತಕ್ಕಂತಹ ಹೇಳಿಕೆಯನ್ನು ಕೂಡ ತಮ್ಮ ಸಮಿತಿಗೆ ಕಳುಹಿಸಿಕೊಡುತ್ತೇನೆ. ಆ ಹೇಳಿಕೆಯ ಹಿನ್ನೆಲೆ ಆಧಾರದ ಮೇಲೆ ನಿಮ್ಮ ಸಮಿತಿ ತೀರ್ಮಾನ ತೆಗೆದುಕೊಳ್ಳಬಹುದು.

ಶ್ರೀ ಕೆ.ಹೆಚ್. ಹನುಮೇಗೌಡ:– ದಿನಾಂಕ 20–22ರಂದು ಮೀಟಿಂಗ್ ಇದೆ. ನೀವು ಕಳುಹಿಸಿಕೊಡುವುದನ್ನು ನಾವು ವೆರಿಫೈ ಮಾಡುತ್ತೇವೆ. ಈ ಮಧ್ಯೆ ಮಾನ್ಯ ಸದಸ್ಯರು ಹಿಂದೆ ಮಂತ್ರಿಯಾಗಿದ್ದರಲ್ಲ ಅವರು ಪದೇ ಪದೇ ನಮ್ಮ ವರ್ಕ್‌ನಲ್ಲಿ ಇಂಟರ್‌ಫಿಯರ್ ಆಗಿ ಒಂದು ಲೆಟರ್ ಬರೆದಿದ್ದಾರೆ. ಅದನ್ನು ಓದುತ್ತೇನೆ. ಈ ರೀತಿ ಡೈರೆಕ್ಷನ್ ಮಾಡಬಹುದೆ? ಹೇಳಿಬಿಡಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಅಧ್ಯಕ್ಷರೇ, ಹಲವಾರು ಪತ್ರಗಳನ್ನು ತಮಗೂ ಬರೆದಿದ್ದೇನೆ. ಈ ಸಮಿತಿ ಯಾವ ರೀತಿ ಹೋಗುತ್ತಿದೆ ಅದನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೇ, ಅವರು ಎಷ್ಟರಮಟ್ಟಿಗೆ ಈ ಸಮಿತಿಯ ಕೆಲಸದಲ್ಲಿ ಇಂಟರ್‌ಫಿಯರ್ ಆಗಿದ್ದಾರೆ ಎಂಬುದಕ್ಕೆ ಒಂದು ಸಣ್ಣ ಉದಾಹರಣೆಯಾಗಿ ಅವರು ಬರೆದಿರುವ ಒಂದು ಕಾಗದ ಓದುತ್ತೇನೆ. ದಯವಿಟ್ಟು ಇದನ್ನು ಓದಿಯಾದ ಮೇಲೆ ತಾವು ಹೇಳಿ.

ಅಧ್ಯಕ್ಷರು:– ಮಾನ್ಯ ಹನುಮೇಗೌಡರೇ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ ಇದರ ಮೇಲೆ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:– ಇದು ಚರ್ಚೆ ಅಲ್ಲ ಅಧ್ಯಕ್ಷರೆ, ಕ್ಲಾರಿಫಿಕೇಷನ್ ಕೊಡಿ. ಪ್ರತಿಯೊಂದಕ್ಕೂ ಇಂಟರ್‌ಫಿಯರ್ ಆಗಿ, ಕಮಿಟಿಯವರು ನಿಷ್ಪಕ್ಷಪಾತವಾಗಿ ವರದಿ ಕೊಡುವುದಕ್ಕೆ ಇವರು ಎಷ್ಟು ಹಿಂಡರೆನ್ಸ್ ಮಾಡಿದರು ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆಯನ್ನೂ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ಅದನ್ನು ನನಗೆ ಬರೆದು ಕಳುಹಿಸಿಕೊಟ್ಟರೆ ಸಾಕು. ನೀವು ಅದನ್ನು ಓದುವುದು ಬೇಡ. ಅದನ್ನು ನಾನು ಬೇಕಾದರೆ ಹಕ್ಕುಚ್ಯುತಿ ಆಗಿದ್ದರೆ, ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸುತ್ತೇನೆ. ಇವೆಲ್ಲಾ ಚರ್ಚಾಸ್ಪದವಾದಂತಹ ವಿಚಾರಗಳು.

ಶ್ರೀ ಕೆ.ಹೆಚ್. ಹನುಮೇಗೌಡ:– ಇದು ಚರ್ಚೆ ಅಲ್ಲ.

ಅಧ್ಯಕ್ಷರು:– ಅಂದರೆ ಇದು ತಕರಾರು, ಇದು ನ್ಯಾಯ.

ಶ್ರೀ ಕೆ.ಹೆಚ್. ಹನುಮೇಗೌಡ:– ಇದು ನಿಜಾಂಶ ಗೊತ್ತಾಗಬೇಕೋ ಬೇಡವೋ ಹೇಳಿ? ಇವರ ವಿಚಾರ ಇನ್ನೊಂದು ಹೇಳುತ್ತೇನೆ....

(ಗೊಂದಲ)

ನಿಜಾಂಶ ಗೊತ್ತಾಗಬೇಕೊ ಬೇಡವೊ ಸ್ವಾಮಿ. ನಮ್ಮ ಆಫೀಸ್ ರಿಕಾರ್ಡ್‌ನಲ್ಲಿ ಸಣ್ಣ ಸಣ್ಣ ವ್ಯವಹಾರ ಮಾಡಿದ್ದಾರೆ. ನನಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರವನ್ನು ಓದುತ್ತೇನೆ.

ಶ್ರೀ ಜಿ. ಪುಟ್ಟ ಸ್ವಾಮಿಗೌಡ:– ಅಧ್ಯಕ್ಷರೆ, ಇದು ಜಾಸ್ತಿ ಆಯಿತು.

ಅಧ್ಯಕ್ಷರು:– ಮಾನ್ಯ ಹನುಮೇಗೌಡರೆ, ಒಬ್ಬ ಮಾನ್ಯ ಸದಸ್ಯರು ಇನ್ನೊಬ್ಬ ಮಾನ್ಯ ಸದಸ್ಯರ ಮೇಲೆ ಯಾವುದೇ ರೀತಿಯ ವೈಯುಕ್ತಿಕವಾದಂಥ ಆರೋಪಣೆಯನ್ನು ಮಾಡಬೇಕಾದರೆ ಅದಕ್ಕೆ ರೂಲ್ಸ್‌ಗಳು ಇವೆ. ಮೊದಲು ನನಗೆ ಬರೆದು ಕಳುಹಿಸಬೇಕು, ನಾನು ಅವರಿಗೆ ಕಾಪಿ ಕಳುಹಿಸಬೇಕು, ಅವರು ಅದಕ್ಕೆ ಸರ್ವಸನ್ನದ್ಧರಾಗಿ ಅಸೆಂಬ್ಲಿಗೆ ಬರಬೇಕು. ಆದುದರಿಂದ ನೀವು ಏನಿದ್ದರೂ ಬರೆದು ಕೊಡಿ, ಅವರಿಗೆ ಆ ಕಾಪಿ ಕಳುಹಿಸುತ್ತೇನೆ. ಪುನಃ 15ನೇ ತಾರೀಖು ಸಭೆ ಸೇರುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ:– ಆಮೇಲೆ ಬರೆದು ಕಳುಹಿಸುತ್ತೇನೆ.

ಅಧ್ಯಕ್ಷರು:– ಈಗ ಸಾಧ್ಯವಿಲ್ಲ, ಅವರು ಎಷ್ಟರಮಟ್ಟಿಗೆ ಇಂಟರ್‌ಫೀಯರ್ ಆಗಿದ್ದಾರೆ, ಅದನ್ನು ನನಗೆ ಕಳುಹಿಸಿಕೊಡಿ.

ಶ್ರೀ ಸಿ. ಬೈರೇಗೌಡ:– ಅವರು ಎಂಥೆಂತಹ ವ್ಯವಹಾರಗಳನ್ನು ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ತಾವು ಬೆಂಕಿ ಆರಿಸುವುದಕ್ಕೆ ಸ್ವಲ್ಪ ಸಹಾಯ ಮಾಡಿ,

ಶ್ರೀ ಕೆ.ಹೆಚ್. ಹನುಮೇಗೌಡ:– ಇವರು ಮಂತ್ರಿಗಳಾಗಿ ಈ ದೇಶವನ್ನು ಸರ್ವನಾಶ ಮಾಡಿದರು ಎನ್ನುವುದನ್ನು ತಿಳಿಸಬೇಕಾಗುತ್ತದೆ. ನನಗೆ ಸ್ವಲ್ಪ ಕಾಲಾವಕಾಶ ಕೊಡಿ, ಈ ದೇಶದ ಜನಗಳಿಗೆ ಗೊತ್ತಾಗಲಿ.....

ಅಧ್ಯಕ್ಷರು:– ಅಧ್ಯಕ್ಷರು ನಿಂತಿರುವಾಗ ಯಾರು ಏನು ಹೇಳಿದರೂ ಅದು ನಮ್ಮ ರಿಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಪುಟ್ಟ ಸ್ವಾಮಿಗೌಡರು ವೈಯುಕ್ತಿಕ ಹೇಳಿಕೆಯನ್ನು ಮಾಡಲಿ ಎಂದು ನಾನು ದೀರ್ಘಕಾಲ ನಾನು ಪಾರ್ಲಿಮೆಂಟರಿ ಕನ್‌ವೆನ್‌ಷನ್ಸ್ ಇವೆಲ್ಲವನ್ನು ಕೂಡ ಯೋಚನೆ ಮಾಡಿ ಓದಿ ಅರ್ಥಮಾಡಿಕೊಂಡು ಅವರಿಗೆ ಅವಕಾಶ ಕೊಟ್ಟೆ ಆದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದು ಏನೆಂದರೆ, ಸಮಿತಿಗಳ ವರದಿಗಳು ಬಹಳ ಜವಾಬ್ದಾರಿಯುತವಾದ ವರದಿಗಳು, ಆದ್ದರಿಂದ ಆ ವರದಿಗಳಿಗೆ ಹೆಚ್ಚಿನ ಮಹತ್ವವನ್ನು ನಮ್ಮ ಶಾಸಕಾಂಗದ ಚೌಕಟ್ಟಿನಲ್ಲಿ ನಾವು ಕೊಡುತ್ತೇವೆ, ಮತ್ತು ಸಮಿತಿಗಳು ಇರತಕ್ಕಂಥದ್ದು ಕಾರ್ಯಾಂಗ ಅದರ ಆಡಳಿತ ವೈಖರಿ, ಅದರ ಒಪ್ಪು, ತಪ್ಪುಗಳು ಇವುಗಳನ್ನು ಸದನಕ್ಕೆ ಸೂಚನೆ ಮಾಡುವುದಕ್ಕೆ. ಆ ದೃಷ್ಟಿಯಿಂದ ತಮಗೆ ಸರಿಯಾದಂಥ ರೀತಿಯಲ್ಲಿ ಈ ಸಮಿತಿ ತನ್ನ ಕಾರ್ಯ ನಿರ್ವಹಿಸಿದೆ ಎನ್ನತಕ್ಕದ್ದು ನನ್ನ ಅಭಿಪ್ರಾಯ. ಆದರೆ ಮಾನ್ಯ ಸದಸ್ಯರು ಆಗ ಮಾನ್ಯ ಸಚಿವರಾಗಿದ್ದಂತಹ ಕಾಲದಲ್ಲಿ ಆಗಿರಬಹುದಾದ ಹಲವಾರು ವ್ಯವಹಾರಗಳ ಬಗ್ಗೆ ಸಮಿತಿ ಸಾಕಾದಷ್ಟು ವಿಶ್ಲೇಷಣೆ ಮಾಡಿದೆ.

ಆದುದರಿಂದ ನಾನು ಅವರಿಗೆ ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶ ಕೊಟ್ಟೆ, ಮತ್ತು ಅದು ಸಮಿತಿಯ ಅಧ್ಯಕ್ಷರನ್ನು ಕುರಿತು ಇರಬೇಕೆಂದು ನಾನು ಅವರಿಗೆ ತಿಳಿಸಿದೆ. ಅವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಅದನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ಪುನಃ ನೀವು ಸಮಿತಿಯ ಮುಂದೆ ಅದನ್ನು ಇಟ್ಟು ನೀವು ನಿಮ್ಮ ವರದಿಯನ್ನು ಸದನಕ್ಕೆ ಒಪ್ಪಿಸಬಹುದು. ಎಂದು ಹೇಳಿ ಇಷ್ಟಕ್ಕೆ ಸೀಮಿತವಾಗಿ ಈ ಕಾರ್ಯಕಲಾಪಗಳು ಮುಗಿಸಬೇಕೇ ಹೊರತು ಇದನ್ನು ಮತ್ತಷ್ಟು ಲಂಬಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ, ಈ ಅಭಿಪ್ರಾಯಕ್ಕೆ ಮಾನ್ಯ ಸದಸ್ಯರಾದ ಹನುಮೇಗೌಡರು ಅನುಮೋದನೆ ಕೊಡುತ್ತಾರೆ ಎಂಬ ವಿಶ್ವಾಸ ಇದೆ ಮತ್ತು ಕೋರಿಕೆಯೂ ಇದೆ. ಇದರಲ್ಲಿ ಯಾರ ಮೇಲೂ ವೈಯಕ್ತಿಕವಾಗಿ ರಿಫ್ಲೆಕ್ಷನ್ ಆಗಿಲ್ಲ. ಅವರಿಗೆ ಈ ಹೇಳಿಕೆಯಲ್ಲಿ ಅಧ್ಯಕ್ಷರು ಎನ್ನುವ ಪದ ಬಂತು ಅದನ್ನು ಕೂಡ ತೆಗೆಸಿ ಹಾಕಿದ್ದೇವೆ; ಸಮಿತಿಯ ಮಟ್ಟಿಗೆ ಈ ಹೇಳಿಕೆ ರಿಫ್ಲೆಕ್ಟ್ ಆಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೇ ನಿರ್ಭಿತಿಯಿಂದ ನಿಷ್ಪಕ್ಷಪಾತವಾಗಿ ಕಮಿಟಿಯವರು ಕೆಲಸ ಮಾಡಬೇಕಾದ್ದು ಸದನದ ಅನಿಸಿಕೆ ಆದರೆ, ಇವರು ಹಿಂದೆ ಸಚಿವರಾಗಿದ್ದಾಗ ಆ ಸಮಿತಿಯವರು ನಿಷ್ಪಕ್ಷಪಾತವಾಗಿ ವರದಿ ಕೊಡುವುದಕ್ಕೆ ಎಷ್ಟು ಆತಂಕಗಳನ್ನು ಮಾಡಿದರು ಎನ್ನುವುದರ ಬಗ್ಗೆ ಅವರು ಬರೆದಂಥ ಸಣ್ಣ ಪತ್ರವನ್ನು ಓದುತ್ತೇನೆ. ತಮ್ಮ ಗಮನಕ್ಕೆ ತರುತ್ತೇನೆ. ಇಂತಹ ಘಟನೆಗಳು ಇನ್ನು ಮುಂದೆ ಯಾವ ಕಮಿಟಿಗೂ ಈ ಸೋಕಾಲ್ಡ್ ಮಂತ್ರಿಗಳು ಮಾಡಬಾರದು ಎನ್ನುವ ದೃಷ್ಟಿಯಿಂದ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ಅದನ್ನು ನೀವು ನಿಮ್ಮ ವರದಿಯಲ್ಲಿ ಸೇರಿಸಿ.

ಶ್ರೀ ಕೆ.ಹೆಚ್. ಹನುಮೇಗೌಡ:– ಇದು ವರದಿಯಲ್ಲಿ ಸೇರಿಸುವುದಿಲ್ಲ. ಇಂಟರ್‌ಫಿಯರ್ ಆಗಿದ್ದಾರೆ ಎನ್ನುವುದನ್ನು ಉದಾಹರಣೆ ಸಹಿತ ಹೇಳುತ್ತಿದ್ದೇನೆ. ತಮ್ಮ ಗಮನಕ್ಕೆ ತರಬೇಕಾಗಿರುವುದು ಈ ಸದನ ಆಗಲೀ ಅಥವಾ ಯಾವುದೇ ಸಮಿತಿ ಆಗಲೀ ಕೆಲಸ ಮಾಡಲಿಕ್ಕೆ ಯಾರಾದರೂ ಕೂಡ ಅಡ್ಡಿಪಡಿಸಿದರೆ ಅದು ಸದನದ ಹಕ್ಕುಚ್ಯುತಿ ಆಗುತ್ತದೆ. ಇಲ್ಲಿ ಅವರು ಅಡ್ಡಿಪಡಿಸಿದ್ದಾರೆ ಎನ್ನತಕ್ಕಂಥದ್ದು ಬಹಳ ಗಹನವಾದಂಥ ವಿಚಾರ.

ಅಧ್ಯಕ್ಷರು:– ನನಗೆ ಬರೆದು ಕಳುಹಿಸಿ. ಹಕ್ಕುಚ್ಯುತಿ ಆಗಬೇಕಾದರೆ ಒಂದು ಸೂಚನೆ ಬರಬೇಕಲ್ಲ! ನಮ್ಮ ಕಡೆಗೆ ಅದನ್ನು ಬರೆದು ಕಳುಹಿಸಿ ಅದನ್ನು ನಾನು ಪರಿಶೀಲಿಸಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾತನಾಡಲು ಅವಕಾಶ ಇಲ್ಲ ಎಂದರೆ ಹೇಗೆ? ಬರೆದು ಕಳುಹಿಸಿದಾಗ ಅದು ನಮಗೆ ನಿಮಗೆ ಇಬ್ಬರಿಗೆ ಗೊತ್ತಾಗುತ್ತದೆ. ಇಲ್ಲಿ ಸದನದ ಬೇರೆ ಮಾನ್ಯ ಸದಸ್ಯರುಗಳು ಇದ್ದಾರೆ. ಎಷ್ಟರಮಟ್ಟಿಗೆ ಇವರು ಇಂಟರ್‌ಫಿಯರ್ ಆಗಿ ಕೆಲಸಕ್ಕೆ ತೊಂದರೆ ಮಾಡಿದ್ದಾರೆ ಎನ್ನುವ ಬಗ್ಗೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:– ನೀವು ಸಮಿತಿಯ ಹಕ್ಕುಚ್ಯುತಿ ಆಗಿದೆ, ಇಂಥವರಿಂದ ಸಮಿತಿಗೆ ಮುಕ್ತ ವಾತಾವರಣದಲ್ಲಿ ಕಾರ್ಯನಿರ್ವಹಣೆ ಮಾಡುವುದಕ್ಕೆ ಸಾಧ್ಯ ಆಗುತ್ತಾ ಇಲ್ಲ ಎಂದು ನನಗೆ ನೀವು ಸೂಚನೆ ಕೊಟ್ಟರೆ ಅದು ಹಕ್ಕುಚ್ಯುತಿ ಆಗುತ್ತದೆಯೋ, ಇಲ್ಲವೋ ಎನ್ನುವುದರ ಬಗ್ಗೆ ನಿರ್ಣಯ ಮಾಡಿ ಅದರ ಬಗ್ಗೆ ನಾನು ತೀರ್ಮಾನ ಮಾಡುತ್ತೇನೆ. ಆ ಬಗ್ಗೆ ನಿಮಗೆ ಶಂಕೆ ಏನೂ ಬೇಕಾಗಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:– ಅಲ್ಲಾ ಸ್ವಾಮಿ ಅವರಿಗೆ ಒಂದು ಸ್ಟೇಟ್‌ಮೆಂಟ್‌ನ್ನು ಮಾಡುವುದಕ್ಕೆ ಆಲೋ ಮಾಡಿದಿರೋ ಇಲ್ಲವೋ? ಹಾಗೆ ಇದನ್ನು ಹೇಳಬೇಕೋ ಬೇಡವೋ?

ಅಧ್ಯಕ್ಷರು:– ನಿಮ್ಮ ಸಮಿತಿಗೆ ಕಳುಹಿಸಿಕೊಡುತ್ತೇನೆ ಆ ಸ್ಟೇಟ್‌ಮೆಂಟ್‌ನ್ನು. You will have the final word. ಅಂತಿಮ ಮಾತು ನಿಮ್ಮದೇ ಆಗುತ್ತದೆ.

11-45 ಎ.ಎಂ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ದೇವನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಡೆತಡೆಯಾಗಿ ರೈತರ ಚಳುವಳಿ

† ಡಾ।। ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೇ, ದೇವನಹಳ್ಳಿಯಲ್ಲಿ ಮೊನ್ನೆ 13ನೇ ತಾರೀಖು ಕೆ.ಇ.ಬಿ.ಯ ಕಛೇರಿ ಮುಂದೆ ಒಂದು ಘಟನೆ ನಡೆದಿದೆ. ಬಹಳ ಮುಖ್ಯವಾದ ವಿಚಾರ. ಅವತ್ತು ರೈತರು ಒಂದು ಅಜಿಟೇಷನ್.....

ಶ್ರೀ ಆರ್.ವಿ. ದೇಶಪಾಂಡೆ:– ನಾವು ಒಪ್ಪಿಕೊಳ್ಳುತ್ತೇವೆ ಸಾರ್, ನಾವು ಸದನ ಶುರುವಾಗುವುದಕ್ಕೆ ಮುಂಚೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಪಾರ್ಟಿ ಮೀಟಿಂಗ್ ಇದ್ದುದರಿಂದ ಸ್ವಲ್ಪ ಲೇಟ್ ಆಯಿತು. ಈ ದೇವನಹಳ್ಳಿಯಲ್ಲಿ ಪವರ್ ಸಪ್ಲೈ ಬಹಳ ಇರಾಟಿಕ್ ಆಗಿದ್ದು ರೈತರಿಗೆ ಬಹಳ ಕಷ್ಟವಾಗುತ್ತಿದೆ, ಬಹಳ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ರೈತರು ಅಲ್ಲಿ ಒಂದು ಅಜಿಟೇಷನ್ ಮಾಡುತ್ತೇವೆ ಅಂತ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ. ಈ ವಿಚಾರ ಕೆ.ಇ.ಬಿ.ಗೂ ತಿಳಿಸಿದ್ದಾರೆ. ಅವತ್ತಿನ ದಿವಸ ಕೆಲವು ಇನ್ಸ್‌ಡೆಂಟ್ಸ್ ಆಗಿವೆ. ಕೆ.ಇ.ಬಿ.ಯ ಜೀಪನ್ನು ಸುಟ್ಟಿದ್ದಾರೆ. ಕಾಯಿದೆ ಬದ್ಧವಾಗಿ ಯಾರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳಲೇಬೇಕು. ಇದರಲ್ಲಿ ಸಂಶಯ ಇಲ್ಲ. ಆದರೆ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರು ಮಾಡಿದ್ದಾರೆ ಅವರನ್ನು ಬಿಟ್ಟು ಇವತ್ತು ಮುಗ್ಧ ರೈತರು ಶಾಂತಿಯುತವಾಗಿ ಯಾರು ಅಜಿಟೇಷನ್ ಮಾಡುತ್ತಿದ್ದರು ಅವರನ್ನು ಅರೆಸ್ಟ್ ಮಾಡುತ್ತಿದ್ದಾರೆ. ಅದರಲ್ಲಿ ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರನ್ನು, ವಿರೋಧ ಪಕ್ಷದ ಮುಖಂಡರನ್ನೂ ಸೇರಿಸಿ ಮೊನ್ನೆ 20 ಜನರನ್ನು ಅರೆಸ್ಟ್ ಮಾಡಿದ್ದಾರೆ. ನಿನ್ನೆ 17 ಜನರನ್ನು ಅರೆಸ್ಟ್ ಮಾಡಿದ್ದಾರೆ. ಮುಗ್ಧ ರೈತರ ಮೇಲೆ ದೌರ್ಜನ್ಯ ಅತ್ಯಾಚಾರ ಏನು ನಡೆದಿದೆ, ಅದು ಸರಿಯಲ್ಲ ಅರೆಸ್ಟ್ ಮಾಡಿರತಕ್ಕದ್ದು ಸರಿಯಾದ ಕ್ರಮ ಅಲ್ಲ. ಯಾರು ಇದರಲ್ಲಿ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಕಾಯಿದೆಯನ್ನು ಕೈಯಲ್ಲಿ ತೆಗೆದುಕೊಂಡು ಗಲಾಟೆ ಮಾಡಿದರೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ, ಆದರೆ ಈ ಪ್ರಕಾರ ಮುಗ್ಧ ರೈತರಿಗೆ, ವಿರೋಧ ಪಕ್ಷದ ಮುಖಂಡರಿಗೆ ಉದ್ದೇಶ ಪೂರ್ವಕವಾಗಿ ತಾವು ಕ್ರಮ ತೆಗೆದುಕೊಂಡರೆ ನಾವು ಅದನ್ನು ಖಂಡಿಸಬೇಕಾಗುತ್ತದೆ. ಇದನ್ನು ಸರ್ಕಾರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್):– ಅಧ್ಯಕ್ಷರೇ ಈ ವಿಚಾರದಲ್ಲಿ ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೇನೆ. ಸತತವಾಗಿ ಕಳೆದ 3 ದಿವಸಗಳಿಂದ ತಮ್ಮ ಗಮನಕ್ಕೂ ಕೂಡ ತಂದಿದ್ದೇನೆ. ಅದಕ್ಕೆ ಸರ್ಕಾರದಿಂದ ಇದುವರೆವಿಗೂ ಯಾವ ರೀತಿಯ ಉತ್ತರ ಕೂಡ ಬಂದಿಲ್ಲ. ತಾವು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇರುವಾಗ ಇದನ್ನು ಪ್ರಸ್ತಾಪ ಮಾಡಿ ಎಂದು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ದೇವನಹಳ್ಳಿಯ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ದೇಶಪಾಂಡೆಯವರು ಒಂದು ಪದವನ್ನು ಉಪಯೋಗಿಸಿದ್ದಾರೆ. ಅದಕ್ಕೆ ನನ್ನ ಒಂದು ಆಕ್ಷೇಪಣೆ ಇದೆ. ಅಲ್ಲಿ ಹೋಗಿದ್ದಂತವರು ಆಂಟಿ ಸೋಷಿಯಲ್ ಎಲಿಮೆಂಟ್ಸ್ ಎಂದು ಹೇಳಿದ್ದಾರೆ. ಅಲ್ಲಿ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರೂ ಹೋಗಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಅಲ್ಲಿ ಇನ್ನೊಸೆಂಟ್ ರೈತರು ಇದ್ದರು. ಅವರು ಅಂಥ ಕೆಲಸ ಮಾಡಿಲ್ಲ. ಆಂಟಿ ಸೋಷಿಯಲ್ ಎಲಿಮೆಂಟ್ಸ್ ಏನಾದರೂ ಮಾಡಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇನೆ.